# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.174 ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಸಮಿತಿ ಸಭೆಯ ನಡುವಳಿಗಳು

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020–21 ದಿನಾಂಕ: 21/09/2020 ಹಾಗೂ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 21.11.2020 ರಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ನಡೆದ ಸಭೆಯ ನಡವಳಿ ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| | ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು |
|---|---|
| 1. | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ |
| 2. | ಶ್ರೀ ರವಿ.ಡಿ ಕಾರ್ಯದರ್ಶಿ, ಸಹಾಯಕ ಅಭಿಯಂತರರು |
| 3. | ಶ್ರೀ ಟಿ ಹನುಮಂತರಾಯ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎಸ್.ಆರ್ ಉಪವಿಭಾಗ/ಯೋಜನೆ ವಿಭಾಗ/ ಬೃಹತ್ ಮಳೆ ನೀರು ಗಾಲುವೆ ವಿಭಾಗ |
| 4. | ಶ್ರೀ ಎ.ಕೆ. ಕೃಷ್ಣಕುಮಾರ್, ರಸ್ತೆ ಮೂಲಭೂತ ಸೌಕರ್ಯ, ವಿಭಾಗ ಸ.ಕಾ.ಅ. |
| 5. | ಶ್ರೀಮತಿ ಲಕ್ಷ್ಮಿ.ಬಿ, ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಬಡಾವಣೆ |
| 6. | ಶ್ರೀ ಸಾಯಿಬಣ್ಣ ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ) |
| 7. | ಶ್ರೀ ಸುಧೀರ್ ಪಶು ವೈದ್ಯಕೀಯ ಪರಿವೀಕ್ಷಕರು, ಬೊಮ್ಮನಹಳ್ಳಿ ವಲಯ |
| 8. | ಶ್ರೀ ವಿನೋದ್, ಹಿರಿಯ ಆರೋಗ್ಯ ಪರಿವೀಕ್ಷಕರು |
| 9. | ಶ್ರೀಮತಿ ಸತ್ಯವಾಣಿ, ಕಿರಿಯ ಆರೋಗ್ಯ ಪರಿವೀಕ್ಷಕರು |
| 10. | ಶ್ರೀ ಚಂದ್ರಶೇಖರ್ ಆರ್.ಡಬ್ಲ್ಯೂ.ಎ |
| 11. | ಶ್ರೀಮತಿ ಡಾ॥ ಶಾಂತಿ, ಆರ್.ಡಬ್ಲ್ಯೂ.ಎ |
| 12. | ಶ್ರೀ ಬಿ.ಎಸ್.ಆರ್ ರೆಡ್ಡಿ, ಆರ್.ಡಬ್ಲ್ಯೂ.ಎ |
| 13. | ಶ್ರೀ ರವಿ.ಬಿ, ಆರ್.ಡಬ್ಲ್ಯೂ.ಎ |

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು

ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿ ಇಂಜಿಯರಿಂಗ್, ಕೋವಿಡ್–19 ತಂಡಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಸುಧಾರಣೆ ತಂದಿರುವುದನ್ನು ಗಮನಿಸಿದ್ದು, ಇನ್ನು ಉತ್ತಮ ರೀತಿಯಲ್ಲಿ ಮುಂದುವರೆಸಲು ನೋಡಲ್ ಅಧಿಕಾರಿಯವರು ತಿಳಿಸಿದರು.

Scanned with Car

| ಕ್ರ.ಸಂ | ಇಲಾಖೆ | ವಿಷಯ |
| --- | --- | --- |
| 1 | ಪಶು ಸಂಗೋಪನೆ | ಹಿಂದಿನ ಸಭೆಯಲ್ಲಿ ಸೂಚಿಸಿರುವಂತೆ ಬೀದಿ ನಾಯಿಗಳ ಹಾಗೂ ಹಂದಿಗಳ ಬಗ್ಗೆ ಸಂಬಂಧಪಟ್ಟ ಸಹಾಯಕ ನಿರ್ದೇಶಕರು, ಪಶುಸಂಗೋಪನೆ ಬೊಮ್ಮನಹಳ್ಳಿ ವಲಯ ರವರ ಪರವಾಗಿ ಸಭೆಯಲ್ಲಿ ಹಾಜರಿದ್ದ, ಪಶು ವೈದ್ಯಕೀಯ ಪರಿವೀಕ್ಷಕರು, ರವರು ಬೀದಿ ನಾಯಿಗಳನ್ನು ಹಿಡಿದ್ದು ಸಾಗಿಸಲು ವಾಹನ ಲಭ್ಯವಿರದ ಕಾರಣ ಕ್ರಮ ವಹಿಸಲಾಗಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರರ ಕಡೆಯಿಂದ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಬೀದಿ ನಾಯಿಗಳನ್ನು ಹಿಡಿಯಲು ಕ್ರಮ ವಹಿಸಲಾಗುವುದೆಂದು ತಿಳಿಸಿದ್ದರೂ. ಇದಕ್ಕೆ ಸೂಕ್ತ ಪರಿಹಾರ ಗೋಶಾಲೆಯಂತಹ ಕೇಂದ್ರ ತೆರೆದು ಅಲ್ಲಿ ಬಿಡಲು ಸದಸ್ಯರು ತಿಳಿಸಿದರು, ಹಾಗೂ ಕ್ರಿಯಾಯೋಜನೆ ಸಿದ್ದಪಡಿಸಿ, ಸೆಕ್ಟರ್‌ವಾರು ಕ್ರಮ ವಹಿಸಲು ಅಧ್ಯಕ್ಷರು ಸೂಚಿಸಿದ್ದರು. ಮತ್ತು ಹಂದಿಗಳನ್ನು ಹಿಡಿದು ಮರಳಿ ಅದೇ ಸ್ಥಳಕ್ಕೆ ಬಿಡುವರಿಗೆ ಹೆಚ್ಚಿನ ದಂಡ ವಿಧಿಸಿಸಲು ಸಭೆಯಲ್ಲಿ ತಿಳಿಸಲಾಗಿತ್ತು. ಈ ಬಗ್ಗೆ ಸಹಾಯಕ ನಿರ್ದೇಶಕರು ಪಶುಸಂಗೋಪನೆ ಬೊಮ್ಮನಹಳ್ಳಿ ವಲಯ ರವರಿಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.<br>ಕ್ರಮ : **ಸಹಾಯಕ ನಿರ್ದೇಶಕರು ಪಶುಸಂಗೋಪನೆ** |
| 2 | ಕಸ ವಿಲೇವಾರಿ ಮತ್ತು ಘನತ್ಯಾಜ್ಯ ನಿರ್ವಹಣೆ | ಹಿಂದಿನ ಸಭೆಯಲ್ಲಿ ಚರ್ಚಿಸಿರುವಂತೆ ಕಸ ವಿಲೇವಾರಿ ಬಗ್ಗೆ ಕ್ರಮ ವಹಿಸಲಾಗಿದೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ.<br>• 17ನೇ ಅಡ್ಡ ರಸ್ತೆ, ಗುಂಡುತೋಪ್ ರಸ್ತೆಯಲ್ಲಿ ಕಸ ಸುರಿಯುತ್ತಿದ್ದಾರೆಂದು ಸದಸ್ಯರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಮಾರ್ಷಲ್‌ಗಳನ್ನು ನೇಮಿಸಿ ಕ್ರಮ ವಹಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.<br>• 5ನೇ ಮುಖ್ಯ ರಸ್ತೆಯಿಂದ ಮಂಗಮ್ಮನಪಾಳ್ಯ ಮುಖ್ಯ ರಸ್ತೆಯ ಕಡೆಗೆ ಹೋಗುವ ದಾರಿಯ ಮಧ್ಯ ಕಸ ಸುರಿಯುತ್ತಿದ್ದು, ಪಾದಚಾರಿ ಮಾರ್ಗದ ಮೇಲೆ ಮಳಿಗೆ ಅಳಡಿಸಿಕೊಂಡಿರುತ್ತಾರೆ, ತೆರವುಗೊಳಿಸಲು ಸದಸ್ಯರು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಹಿರಿಯ ಆರೋಗ್ಯ ಪರಿವೀಕ್ಷಕರು, ಕ್ರಮ ವಹಿಸಲಾಗಿದೆ ಎಂದು ಅಧ್ಯಕ್ಷರಿಗೆ ತಿಳಿಸಿರುತ್ತಾರೆ.<br>• ತ್ಯಾಜ್ಯವನ್ನು ದೊಡ್ಡ ಚೀಲ ದಲ್ಲಿ ತುಂಬಿ ಹೆಚ್.ಎಸ್.ಆರ್ ಬಡಾವಣೆ ವ್ಯಾಪ್ತಿಯಲ್ಲಿ ಸುರಿಯುತ್ತಿದ್ದಾರೆ ಎಂದು ಸಭೆಯಲ್ಲಿ ಸದಸ್ಯರು ತಿಳಿಸಿರುತ್ತಾರೆ. ಈ ಬಗ್ಗೆ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಷ್ಟು ಮಾಂಸದ ಅಂಗಡಿಗಳಿಗೆ ಪರವಾನಿಗಿಯನ್ನು ನೀಡಿದ್ದಿರಿ ಎಂದು ಅಧ್ಯಕ್ಷರು ಸಂಬಂಧಪಟ್ಟ ಪಶುಸಂಗೋಪನೆ ಅಧಿಕಾರಿಗಳಿಗೆ ಮಾಹಿತಿ ಒದಗಿಸುವಂತೆ ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಘನ ತ್ಯಾಜ್ಯ ವಿಲೇವಾರಿ ಮೇಲ್ವಿಚಾರಕರನ್ನು ಆಂತರಿಕ ಬದಲಾವಣೆ ಮಾಡುವಂತೆ ಸದಸ್ಯರು ತಿಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ. |

Scanned with Car

| | | |
|---|---|---|
| | | • ವಾರ್ಡ್ ವ್ಯಾಪ್ತಿಯಲ್ಲಿ ಒಣ ತ್ಯಾಜ್ಯ ಕೇಂದ್ರ ನಿರ್ಮಿಸಲು ವಾರ್ಡ್ ಸಮಿತಿ ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಆರೋಗ್ಯ ಅಧಿಕಾರಿಗಳಿಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>• ಪಾಲಿಕೆ ಆಡಳಿತಗಾರರ ಸೂಚನೆಯಂತೆ, ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಒಟ್ಟು 33 ಆಟೋಗಳು ಲಭ್ಯವಿದ್ದು, 1ನೇ ಸೆಕ್ಟರ್ ರಲ್ಲಿ-10, 2ನೇ ಸೆಕ್ಟರ್ ರಲ್ಲಿ-7, 3ನೇ ಸೆಕ್ಟರ್‌ರಲ್ಲಿ-3, 4ನೇ ಮತ್ತು 7ನೇ ಸೆಕ್ಟರ್ ರಲ್ಲಿ-10 ಮತ್ತು 6ನೇ ಸೆಕ್ಟರ್-3, ರಾಜೀವಗಾಂಧಿನ ನಗರ -2, ಇಬ್ಬಲೂರು-1, ಹಾಗೂ ಹಸಿ ಕಸ ವಿಲೇವಾರಿಗೆ-3 ವಾಹನ ಮತ್ತು ಒಣ ತ್ಯಾಜ್ಯ ವಿಲೇವಾರಿಗೆ-1 ವಾಹನವನ್ನು ಉಪಯೋಗಿಸಲಾಗುತ್ತಿದೆ ಎಂದು ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿರುತ್ತಾರೆ.<br>ಕ್ರಮ :- ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 174 |
| 3 | ಬೀದಿ ದೀಪಗಳು (ವಿದ್ಯುತ್) | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಇಂದಿನ ಸಭೆಗೆ ಸಹಾಯಕ ಅಭಿಯಂತರರು ವಿದ್ಯುತ್ ಗೈರು ಹಾಜರಾಗಿರುತ್ತಾರೆ. |
| 4 | ಯೋಜನಾ ವಿಭಾಗ ಬೊಮ್ಮನಹಳ್ಳಿ | ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ಥಾಪಿಸಲಾಗಿದ್ದು, ಕ್ರಮಕೈಗೊಳ್ಳಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು ತಿಳಿಸಿರುತ್ತಾರೆ. |
| 5 | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಪ್ರಸ್ಥಾಪಿಸಲಾಗಿದ್ದು, ಕ್ರಮಕೈಗೊಳ್ಳಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ತಿಳಿಸಿರುತ್ತಾರೆ. ಮತ್ತು 17ನೇ ಅಡ್ಡ ರಸ್ತೆ, ಕೇಕ್‌ವಾಲ್ ಅಂಗಡಿ ಹತ್ತಿರ, ಕಾಮಗಾರಿ ಪ್ರಗತಿಯಲ್ಲಿದ್ದು, ತುರ್ತಾಗಿ ಪೂರ್ಣಗೊಳಿಸಲಾಗುವುದೆಂದು ತಿಳಿಸಿರುತ್ತಾರೆ.<br>ಕ್ರಮ:- ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 6 | ಬೆಸ್ಕಾಂ | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಇಂದಿನ ಸಭೆಗೆ ಸಹಾಯಕ ಅಭಿಯಂತರರು ವಿದ್ಯುತ್ ಗೈರು ಹಾಜರಾಗಿರುತ್ತಾರೆ. ನೋಟಿಸ್ ಜಾರಿ ಮಾಡಲು ಅಧ್ಯಕ್ಷರು ಸೂಚಿಸಿರುತ್ತಾರೆ. ಮತ್ತು ಮೊಬೈಲ್ ಟವರ್ ತೆರವುಗೊಳಿಸಲು ಸ.ಕಾ.ನಿ.ಅ. ಬೆಸ್ಕಾಂ/ಬಿಬಿಎಂಪಿ, ಸಹಾಯಕ ಕಂದಾಯ ಅಧಿಕಾರಿಗಳಿಗೆ ಮತ್ತು ಪೋಲಿಸ್ ಸಿಬ್ಬಂದಿ ಸಹಕಾರದೊಂದಿಗೆ ತೆರವುಗೊಳಿಸಲು ಕ್ರಮ ವಹಿಸುವಂತೆ ಅಧ್ಯಕ್ಷರು ತಿಳಿಸಿರುತ್ತಾರೆ. |
| 7 | ಎಸ್.ಡಬ್ಲ್ಯೂ.ಡಿ ವಿಭಾಗ | ವಾರ್ಡ್ ವ್ಯಾಪ್ತಿಯ 31ನೇ "ಎ" ಮುಖ್ಯ ರಸ್ತೆಯಿಂದ 17ನೇ ಮುಖ್ಯ ರಸ್ತೆ ವರೆಗಿನ ಚರಂಡಿಯಲ್ಲಿ ಹೂಳೆತ್ತಲು, ಶೊಲ್ಡರ್ ಡ್ರೈನ್ ಸ್ವಚ್ಛಗೊಳಿಸಲು ಹಾಗೂ ಕವರಿಂಗ್ ಸ್ಲ್ಯಾಬ್ ಅಳವಡಿಸುವಂತೆ ಸಭೆಯಲ್ಲಿ ಸದಸ್ಯರು ಕೋರಿರುತ್ತಾರೆ. |

Scanned with Car

| | | |
|---|---|---|
| | | ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೃಹತ್ ಮಳೆ ನೀರು ಗಾಲುವೆ ವಿಭಾಗ) |
| 8 | ಕಾಮಗಾರಿ ವಿಭಾಗ | ವಾರ್ಡ್ ವ್ಯಾಪ್ತಿಯಲ್ಲಿ ವಾರ್ಡ್ ಚರಂಡಿಗಳಲ್ಲಿ ಹೂಳೆತ್ತಲು ಕ್ರಿಯಾಯೋಜನೆ ಸಿದ್ಧಪಡಿಸಿ ಸೆಕ್ಟರ್ ವಾರು ಸ್ವಚ್ಛಗೊಳಿಸುವಂತೆ ಸದಸ್ಯರು ವಾರ್ಡ್ ಸಭೆಯಲ್ಲಿ ಕೋರಿರುತ್ತಾರೆ. ಮತ್ತು ಗೇಲ್ ಗ್ಯಾಸ್ ರವರು ಅನಧಿಕೃತವಾಗಿ ರಸ್ತೆ ಅಗೆದಿರುವ ಕಾರಣ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಡಕ್ಕೆ ತೊಂದರೆ ಉಂಟಾಗಿರುತ್ತದೆ ಎಂದು ಸಭೆಯಲ್ಲಿ ಸದಸ್ಯರು ತಿಳಿಸಿರುತ್ತಾರೆ.<br>ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಎಸ್.ಆರ್ ಉಪವಿಭಾಗ |

ಅಂತಿಮವಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು (ಮಹಾದೇವಪುರ) ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ಹೆಚ್.ಎಸ್.ಆರ್.ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ ವಾರ್ಡ್ ನಂ.174
ಹೆಚ್.ಎಸ್.ಆರ್.ಬಡಾವಣೆ ಹಾಗೂ
ಜಂಟಿ ಆಯುಕ್ತರು ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with Car